ಇ.ಪಿ.ನಂ.**21/2018** ಪಿ.ಡಬ್ಲ್ಯೂ: **1**
ಎ.ಕೆ. ಸುರೇಶ

ದಿನಾಂಕಃ **20.03.2021** ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಡಿಕ್ರಿದಾರರ ಪರವಾಗಿ ಶ್ರೀ ಜಿ.ಬಿ. ವಕೀಲರಿಂದಃ-

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯವು ಸತ್ಯವಾಗಿರುತ್ತದೆ ಎಂದು ಪ್ರಮಾಣಿಕರಿಸುತ್ತೇನೆ.

ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 1 ಎಂದು, 5 ಪಹಣಿಗಳನ್ನು ನಿ.ಪಿ. 2 ರಿಂದ 6 ಎಂದು, ಸಹಾಯಕ ಆಯುಕ್ತರ ಆದೇಶದ ನಕಲನ್ನು ನಿ.ಪಿ. 7 ಎಂದು, ಎಂ ಆರ್ ನಕಲನ್ನು ನಿ.ಪಿ. 8 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಜಡ್ಜ್ ಮೆಂಟ್ ಡೆಬ್ಟರ್ ಪರವಾಗಿ ಶ್ರೀ ಎಚ್ ಬಿ ಆರ್ ಕೆ ವಕೀಲರಿಂದಃ-

ಅಡವಿಯಪ್ಪ ನನ್ನ ತಾಯಿಯ ಅಣ್ಣ. ಚೆನ್ನಬಸಪ್ಪ ಮತ್ತು ಹಾಲಪ್ಪರವರನ್ನು ನಾನು ನೋಡಿದ್ದೇನೆ. ಅವರು ಅಡವಿ ಮಲ್ಲಿನಕೇರಿ ಗ್ರಾಮದಲ್ಲಿ ದೊಡ್ಡ ಮನೆತನದವರು ಎಂದರೆ ಸರಿ. ಸರ್ವೇ ನಂಬರ್ 87 ರ ಸ್ವತ್ತು ಚೆನ್ನಬಸಪ್ಪನವರು ಬದುಕಿದ್ದ ಕಾಲದಿಂದಲೂ ಅವರ ಕುಟುಂಬದಲ್ಲಿಯೇ ಇದ್ದು ಅವರ ಮರಣ ನಂತರ ಅವರ ಮಕ್ಕಳ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. 1981 ರಲ್ಲಿ ಸರ್ಕಾರ ನಮಗೆ ಕೊಟ್ಟಿದ್ದು, ಅಂದಿನಿಂದ ಇಲ್ಲಿಯವರೆಗೆ ನಾವೇ ಸ್ವಾಧೀನದಲ್ಲಿದ್ದೇವೆ ಎನ್ನುತ್ತಾರೆ. ಚೆನ್ನಬಸಪ್ಪನವರು ಭೂನ್ಯಾಯ ಮಂಡಳಿಯ ಮುಂದೆ ಫಾರಂ ನಂ.11 ರ ಅರ್ಜಿ ಸಲ್ಲಿಸಿದ್ದರು ಎಂದರೆ, ಅದೇನೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. 1988 ರಲ್ಲಿ ಭೂನ್ಯಾಯ ಮಂಡಳಿಯಿಂದ ಆದೇಶ ಆಗಿದೆ ಎಂದರೆ, ಆಗ ನಾನು ಸಣ್ಣ ಹುಡುಗ ನನಗೆ ಗೊತ್ತಿಲ್ಲ, ನನ್ನ ದೊಡ್ಡಪ್ಪನಿಗೆ ಗೊತ್ತಿರಬಹುದು ಎನ್ನುತ್ತಾರೆ. ಭೂನ್ಯಾಯ ಮಂಡಳಿಯ ಆದೇಶದ ವಿರುದ್ಧ ಅಡವಿಯಪ್ಪ ಯಾವುದೇ ಅಪೀಲು ಸಲ್ಲಿಸಿಲ್ಲ ಎಂದರೆ ಸರಿ. 1991 ರಿಂದ ಚೆನ್ನಬಸಪ್ಪನ ಮಕ್ಕಳ ನಡುವೆ ಕುಟುಂಬದಲ್ಲಿ ಆಸ್ತಿ ವಿಚಾರದಲ್ಲಿ ವ್ಯಾಜ್ಯ ಇದೆ ಅಂತ ಅಡವಿಮಲ್ಲಿಕೇರಿ ಗ್ರಾಮದ ಸುತ್ತಮುತ್ತ ಎಲ್ಲರಿಗೂ ಗೊತ್ತು ಎಂದರೆ ಸರಿ. ಆಸ್ತಿ ವಿಚಾರವಾಗಿ ಚೆನ್ನಬಸಪ್ಪನ ಮಕ್ಕಳು ಮತ್ತು ಹಾಲಪ್ಪನ ಮಕ್ಕಳ ನಡುವೆ ಕ್ರಿಮಿನಲ್ ಮೊಕದ್ದಮೆ ದಾಖಲಾಗಿದೆ ಎಂದರೆ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪ್ರಮಾಣ ಪತ್ರ ಸಲ್ಲಿಸಲು ನಾನೇ ಮಾಹಿತಿ ನೀಡಿರುತ್ತೇನೆ ಸರ್ವೇ ನಂಬರ್ 87, 14 ಮತ್ತು 15 ರ ಸ್ವತ್ತುಗಳು ಒಂದಕ್ಕೊಂದು ಹೊಂದಿಕೊಂಡಿವೆ ಎಂದರೆ ಬೇರೆ ಸ್ವತ್ತುಗಳ ಬಗ್ಗೆ ನನಗೆ ಗೊತ್ತಿಲ್ಲ, ನನಗೆ ನಮ್ಮ ಸ್ವತ್ತು ಮಾತ್ರ ಗೊತ್ತು ಎನ್ನುತ್ತಾರೆ ಸರ್ವೇ ನಂಬರ್ 87 ರ ಒಟ್ಟು ವಿಸ್ತೀರ್ಣ 14.80 ಎಕರೆ ಎಂದರೆ ಸರಿ. ಸರ್ವೇ ನಂಬರ್ 87 ಕ್ಕೆ ಸಂಬಂಧಪಟ್ಟಂತೆ ಭೂನ್ಯಾಯ ಮಂಡಳಿಯಲ್ಲಿ ಚೆನ್ನಬಸಪ್ಪನಿಗೂ ಮತ್ತು ನಮ್ಮ ಪೂರ್ವಜರಿಗು ವ್ಯಾಜ್ಯ ನಡೆದಿದೆ ಎಂದರೆ ಅದು ನನಗೆ ಗೊತ್ತಿಲ್ಲ. ಭೂನ್ಯಾಯ ಮಂಡಳಿಯಲ್ಲಿ ವ್ಯಾಜ್ಯ ನಡೆದ ವಿಚಾರ ಗೊತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 87, 14 ಮತ್ತು 15 ರ ಸ್ವತ್ತುಗಳಿಗೆ ಸಂಬಂಧಪಟ್ಟಂತೆ 1988 ರಲ್ಲಿ ಭೂನ್ಯಾಯ ಮಂಡಳಿಯಿಂದ ಅಂತಿಮ ಆದೇಶ ಆಗಿದೆ ಎಂದರೆ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಆದೇಶದಂತೆ 1988 ರಿಂದ ಚೆನ್ನಬಸಪ್ಪ ಮತ್ತು ಆತನ ಮಕ್ಕಳು ಸ್ವಾಧೀನದಲ್ಲಿದ್ದಾರೆ ಎಂದರೆ ಅದು ನನಗೆ ಗೊತ್ತಿಲ್ಲ.

ಇ.ಪಿ.ನಂ.**21/2018** ಪಿ.ಡಬ್ಲ್ಯೂ಼ 1
ಎ.ಕೆ. ಸುರೇಶ

ನಾವು ಸ್ವಾಧೀನದಲ್ಲಿರುವ ಅಕ್ಕಪಕ್ಕದ 3 ಎಕರೆಯಲ್ಲಿ ರೇಣುಕಮ್ಮನವರು ಸ್ವಾಧೀನದಲ್ಲಿ ಇಲ್ಲ. ನಮ್ಮ ಸ್ವತ್ತಿನ ಅಕ್ಕಪಕ್ಕದಲ್ಲಿ ಹರ್ಷವರ್ಧನ, ರವಿಕುಮಾರ್ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 87 ರ 14.80 ಎಕರೆ ಸ್ವತ್ತಿಗೆ ದೊಡ್ಡ ಹೊಲ ಎಂದು ಕರೆಯುತ್ತಾರೆ ಎಂದರೆ ಸರಿಯಲ್ಲ, ಹಾಳು ಹೊಲ ಎಂದು ಕರೆಯುತ್ತಾರೆ. ನಮ್ಮ 3 ಎಕರೆ ಸ್ವತ್ತಿನ ಚೆಕ್ಕು ಬಂದಿ ಎಂದರೆ ಪೂರ್ವಕ್ಕೆ ನಿಂಗಪ್ಪ, ದಕ್ಷಿಣಕ್ಕೆ ಹಳ್ಳ, ಪಶ್ಚಿಮಕ್ಕೆ ಎ ಕೆ ಹನುಮಂತಪ್ಪ ಮತ್ತು ಉತ್ತರಕ್ಕೆ ದಾರಿ ಇದೆ. ಈ ಚೆಕ್ಕು ಬಂದಿಗೆ ಸಂಬಂಧಪಟ್ಟಂತೆ ನಮ್ಮ ದೊಡ್ಡಪ್ಪನಿಗೆ ಸರ್ಕಾರದವರು ಪಟ್ಟ ಕೊಟ್ಟಿರುವುದಿಲ್ಲ. ಸ್ವತ್ತಿನಲ್ಲಿ ಬೆಳೆದ ಬೆಳೆಯನ್ನು ನಾವು ಹಳ್ಳಿಯಲ್ಲಿಯೇ ಮಾರಾಟ ಮಾಡುತ್ತೇವೆ, ನಾವು ಎ ಪಿ ಎಂ ಸಿ ಗೆ ಹಾಕುವುದಿಲ್ಲ ಎನ್ನುತ್ತಾರೆ. ಎಂ ಆರ್ 8/91-92 ರ ಹಕ್ಕುಬದಲಾವಣೆಯ ಆದೇಶವನ್ನು ನಮ್ಮ ದೊಡ್ಡಪ್ಪನವರು ಎಲ್ಲಿಯೂ ಪ್ರಶ್ನಿಸಿಲ್ಲ. ರವಿ ಮತ್ತು ಹರ್ಷವರ್ದನವರವರ ತಂದೆ ಹೆಸರು ಚೆನ್ನಬಸಪ್ಪ ಎಂದರೆ ಸರಿ. ಕೆ ಹಾಲಪ್ಪ ತಂದೆ ಸಿದ್ದಪ್ಪ ಎಂದರೆ ಚೆನ್ನಬಸಪ್ಪನ ಅಣ್ಣ ಎಂದರೆ ಸರಿ. ನಾನು ಹಾಜರುಪಡಿಸಿರುವ ಪಹಣಿಯಲ್ಲಿ ಸರ್ಕಾರದ ಆದೇಶದ ರೀತ್ಯಾ ಕೆ ಹಾಲಪ್ಪ ತಂದೆ ಸಿದ್ದಪ್ಪರವರ ಹೆಸರಿಗೆ ಖಾತೆಯಾಗಿರುವುದು ನಿಜ ಎಂದರೆ ನನಗೆ ಓದಲು, ಬರೆಯಲು ಬರುವುದಿಲ್ಲ ಎನ್ನುತ್ತಾರೆ. 1991-92 ರ ಪಹಣಿಯಲ್ಲಿ ನಿಂಗಪ್ಪ, ಅಡವಿಯಪ್ಪ, ದುರುಗಪ್ಪ, ಹಾಲಪ್ಪ ರವರ ಹೆಸರನ್ನು ಹೊಡೆದುಹಾಕಿ ಕೆ ಹಾಲಪ್ಪನ ಹೆಸರನ್ನು ನಮೂದಿಸಲಾಗಿದೆ ಎಂದರೆ ನನಗೆ ಓದಲು, ಬರೆಯಲು ಬರುವುದಿಲ್ಲ ಎನ್ನುತ್ತಾರೆ. ಚೆನ್ನಬಸಪ್ಪನವರ ಹೇಳಿಕೆಯ ಆಧಾರದಲ್ಲಿ ಭೂನ್ಯಾಯ ಮಂಡಳಿಯಲ್ಲಿ ಹಾಲಪ್ಪನ ವಿರುದ್ಧ ಆದೇಶ ಆಗಿದೆ ಎಂದರೆ ಅದು ನನಗೆ ಗೊತ್ತಿಲ್ಲ. ಜಾರಿ ಅರ್ಜಿಯ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುವವರಿಗೆ ಸ್ವತ್ತು ಬಿಡುವಂತೆ ಆದೇಶ ಆಗಿದೆ ಎಂದರೆ, ನಮಗೆ ಯಾವುದೇ ಆದೇಶ ಬಂದಿಲ್ಲ ಎನ್ನುತ್ತಾರೆ. ಪ್ರತಿವಾದಿಯರ ಮಾತು ಕೇಳಿ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 87 ರಲ್ಲಿ ನಮ್ಮ ದೊಡ್ಡಪ್ಪ ಹಾಲಪ್ಪನವರು ಯಾವತ್ತು ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಹರ್ಷವರ್ಧನ ಮತ್ತು ರವೀಂದ್ರರವರು ಕೇಸಿನ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇಲ್ಲದಿದ್ದರು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ-ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಗಣಕೀಕರಿಸಿದೆ)
ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನಹಡಗಲಿ